**ದಿನಾಂಕ:11.05.2020 ರಂದು ಬೆಳಿಗ್ಗೆ 11–30 ಗಂಟೆಗೆ ಶ್ರೀ. ಜಿ.ಕೃಷ್ಣಮೂರ್ತಿ ಬಿ.ಬಿ.ಎಂ.ಪಿ ಸದಸ್ಯರು ವಾರ್ಡ್ ನಂ.99 (ರಾಜಾಜಿನಗರ) ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ರವರ ಅಧ್ಯಕ್ಷತೆಯಲ್ಲಿ ನಡೆದ ವಿಪತ್ತು ನಿರ್ವಹಣಾ ಕೋಶದ ಸಭೆಯ ನಡವಳಿಗಳು:**

**ಸಭೆಗೆ ಹಾಜರಾಗಿದ್ದವರ ವಿವರಗಳು:**

| ಕ್ರ.ಸಂ | ಪಾಲಿಕೆ ಸದಸ್ಯರು/ ಅಧಿಕಾರಿ/ ನೌಕರರ ಹೆಸರು (ಶ್ರೀಮತಿ/ಶ್ರೀ) | ಪದನಾಮ | ಇಲಾಖೆ/ಕಛೇರಿ | ದೂರವಾಣಿ ಸಂಖ್ಯೆ | ಸಹಿ |
|---|---|---|---|---|---|
| 1 | ಜಿ.ಕೃಷ್ಣಮೂರ್ತಿ | ಬಿ.ಬಿ.ಎಂ.ಪಿ ಸದಸ್ಯರು ವಾರ್ಡ್ ನಂ.99 ರಾಜಾಜಿನಗರ | – | 9448044748 | ಹಾಜರಿ |
| 2 | ಸುಂದರ್. ಇ. ನಾಯಕ್ | ಸದಸ್ಯರು | – | 9380726623 | ಗೈರು ಹಾಜರಿ |
| 3 | ರಾಜಮ್ಮ | ಸದಸ್ಯರು | – | 7676000646 | ಹಾಜರಿ |
| 4 | ಬಿ. ವಿ. ಚಲುವರಾಜು | ಸದಸ್ಯರು | – | 9845858111 | ಹಾಜರಿ |
| 5 | ಭಾರತಿ | ಸದಸ್ಯರು | – | 8660523739 | ಗೈರು ಹಾಜರಿ |
| 6 | ರಾಜೇಶ್ವರಿ | ಸದಸ್ಯರು | – | 8197078061 | ಗೈರು ಹಾಜರಿ |
| 7 | ಸದಾಶಿವರಾವ್ | ಸದಸ್ಯರು | – | 8050946978 | ಹಾಜರಿ |
| 8 | ಕೋದಂಡರಾಮು | ಸದಸ್ಯರು | – | 9945642259 | ಹಾಜರಿ |
| 9 | ಬಿ. ಹೆಚ್. ಮಹೇಶ್ | ಸದಸ್ಯರು | – | 8310170071 | ಗೈರು ಹಾಜರಿ |
| 10 | ಜಿ. ಮೋಹನ್ | ಸದಸ್ಯರು | – | 9844121997 | ಗೈರು ಹಾಜರಿ |
| 11 | ಕೆ. ಶ್ರೀಧರ್ | ಸದಸ್ಯರು | – | 9035684051 | ಹಾಜರಿ |
| 12 | ಸುಮಲತ | ಸ.ಕಾ.ಅ | – | 9632038188 | ಗೈರು ಹಾಜರಿ |
| 13 | ಸಿ. ರೇಖಾ | ಸ.ಕಂ.ಅ (ರಾ) | – | 9480685474 | ಹಾಜರಿ |
| 14 | ರಘು | ಲೈಸನ್ ಆಫೀಸರ್ | ಕೇಂದ್ರ ಕಛೇರಿ | | ಹಾಜರಿ |
| 15 | ನಾರಾಯಣ | ಸಹಾಯಕ ಅಭಿಯಂತರರು (ರಾ) | ಸ.ಕಾ.ಅ. (ರಾಜಾಜಿನಗರ) | 9986020676 | ಹಾಜರಿ |
| 16 | ಸಂತೋಷ್ ಕುಮಾರ್ ನಾಯಕ್ | ಹಿರಿಯ ಆರೋಗ್ಯ ಪರಿವೀಕ್ಷಕರು | ಆರೋಗ್ಯ ವೈದ್ಯಾಧಿಕಾರಿ(ರಾ) | 9663527080 | ಹಾಜರಿ |
| 17 | ರಘು | ಕಿರಿಯ ಆರೋಗ್ಯ ಪರಿವೀಕ್ಷಕರು | ಸ.ಕಂ.ಅ (ಘನ ತ್ಯಾಜ್ಯ) | 9916389955 | ಗೈರು ಹಾಜರಿ |
| 18 | ವಿಶ್ವ ಪ್ರಸಾದ್ | ಸಹಾಯಕ ಅಭಿಯಂತರರು | ಬೆಸ್ಕಾಂ | 9449868872 | ಗೈರು ಹಾಜರಿ |
| 19 | ಬಿ.ಸಿ. ಶಂಕರ್ ರಾಜ್ | ಸಹಾಯಕ ಅಭಿಯಂತರರು | ಬೆಸ್ಕಾಂ | 9449870528 | ಗೈರು ಹಾಜರಿ |
| 20 | ನಾಗರಾಜ್ ಕೆ ಬಿ | ಸಹಾಯಕ ಅಭಿಯಂತರರು | ಬಿಡಬ್ಲ್ಯೂಎಸ್ಎಸ್ಬಿ | 9845444076 | ಹಾಜರಿ |
| 21 | ಹರೀಶ್ ನಾಯಕ್ ಡಿ | ಸಹಾಯಕ ಅಭಿಯಂತರರು | ಬಿಡಬ್ಲ್ಯೂಎಸ್ಎಸ್ಬಿ | 8867626352 | ಗೈರು ಹಾಜರಿ |
| 22 | ಚಿಕ್ಕಮ್ಮ | ಸಹಾಯಕ ಅಭಿಯಂತರರು | ಕಾ.ಅ (ವಿದ್ಯುತ್–ಪಶ್ಚಿಮ) | 7619213348 | ಗೈರು ಹಾಜರಿ |
| 23 | ಶಿವರಾಮಯ್ಯ ಹೆಚ್ | ಎ. ಎಸ್. ಐ | ಸಂಚಾರಿ ಪೋಲೀಸ್ | 9449109388 | ಗೈರು ಹಾಜರಿ |
| 24 | ವೆಂಕಟೇಶ್ | ಪೋಲೀಸ್ ಇನ್ಸ್‌ಪೆಕ್ಟರ್ | ಕ್ರೈಮ್(ರಾಜಾಜಿನಗರ) | 9480801316 | ಗೈರು ಹಾಜರಿ |
| 25 | ಮಂಜೇಶ್ | ಸ್ಪೆಷಲ್ ಪೋಲೀಸ್ | ಕ್ರೈಮ್(ರಾಜಾಜಿನಗರ) | 9663234175 | ಗೈರು ಹಾಜರಿ |
| 26 | ಡಾ.ಪ್ರದೀಪ್ ಕುಮಾರ್ | ವೈದ್ಯರು | ಪ್ರಾಥಮಿಕ ಆರೋಗ್ಯ ಕೇಂದ್ರ | 9980767810 | ಗೈರು ಹಾಜರಿ |
| 27 | ಆನಂದ್ ಹೆಚ್ ವಿ | ಸಹಾಯಕ ಅಭಿಯಂತರರು | ಬೆಸ್ಕಾಂ | 9449870117 | ಹಾಜರಿ |
| 28 | ನರಸಿಂಹ | ಡಬ್ಲ್ಯೂ ಐ | ಬಿಡಬ್ಲ್ಯೂಎಸ್ಎಸ್ಬಿ | 9844348914 | ಹಾಜರಿ |
| 29 | ಎಂ ರಾಜೇಶ್ | ಕಂದಾಯ ವಸೂಲಿಗಾರರು | ಮಾರುಕಟ್ಟೆ–ಪಶ್ಚಿಮ | 9738505273 | ಹಾಜರಿ |

ಸದಸ್ಯ ಕಾರ್ಯದರ್ಶಿಗಳು ಮಾತನಾಡುತ್ತಾ, ಸಭೆಗೆ ಹಾಜರಾಗಿದ್ದ ಮಾನ್ಯ ಅಧ್ಯಕ್ಷರು, ಸದಸ್ಯರು ಪಾಲಿಕೆಯ ಅಧಿಕಾರಿಗಳು/ನೌಕರರಿಗೆ ಹಾಗೂ ವಿವಿಧ ಇಲಾಖೆಗಳಿಂದ ಬಂದಿದ್ದ ಅಧಿಕಾರಿಗಳಿಗೆ ಸ್ವಾಗತ ಕೋರುತ್ತಾ ಸಭೆಯನ್ನು ಪ್ರಾರಂಭಿಸಲಾಯಿತು.

- ಸಭೆಯಲ್ಲಿ ಹಾಜರಿದ್ದ ವಿಪತ್ತು ನಿರ್ವಹಣಾ ಕೋಶದ ಸಮನ್ವಯ ಅಧಿಕಾರಿ (Liasón Officer) ಆದ ಶ್ರೀ.ರಘು ರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ವಾರ್ಡ್ ಕಮಿಟಿ ಕಾಯ್ದೆ 2016 ರ ನಿಯಮ 8 ರಂತೆ ಪ್ರತಿ ವಾರ್ಡ್ ವ್ಯಾಪ್ತಿಯಲ್ಲಿ ವಿಪತ್ತು ನಿರ್ವಹಣಾ ಕೋಶ ರಚಿಸಬೇಕಾಗಿದ್ದು, ಅದರಂತೆ ರಾಜಾಜಿನಗರ ವಾರ್ಡ್‌ನಲ್ಲಿ ರಚಿಸಿರುವ ವಿಪತ್ತು ನಿರ್ವಹಣಾ ಕೋಶದಲ್ಲಿ ಸ್ಥಳೀಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪ್ರತಿನಿಧಿಯನ್ನು ಹಾಗೂ ಭಾರತ ಸರ್ಕಾರದ ಇಲಾಖೆಗಳ ಪ್ರತಿನಿಧಿಗಳನ್ನು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರತಿನಿಧಿ, ಅಗ್ನಿಶಾಮಕ ದಳದ ಸಿಬ್ಬಂದಿ ಮತ್ತು ಸ್ವಯಂ ಸೇವಕರನ್ನು ಗುರುತಿಸಿ ಅವರುಗಳನ್ನು ಸಹ ಈ ವಿಪತ್ತು ನಿರ್ವಹಣಾ ಕೋಶದಲ್ಲಿ ಸೇರಿಸಿಕೊಳ್ಳಲು ತಿಳಿಸಿದರು.
  ಕ್ರಮ: <u>ಸಹಾಯಕ ಕಂದಾಯ ಅಧಿಕಾರಿ (ರಾಜಾಜಿನಗರ).</u>

- ರಾಜಾಜಿನಗರ ವಾರ್ಡ್ ಪ್ರಸ್ತುತ ಹಸಿರು ವಲಯವಾಗಿದ್ದು, ಕೊರೋನ ವೈರಸ್ ಹರಡದಂತೆ ತೆಗೆದುಕೊಂಡಿರುವ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಮಾಹಿತಿ ಸಂಗ್ರಹಿಸಿದರು ಮತ್ತು ಈ ವಾರ್ಡ್ ವ್ಯಾಪ್ತಿಯಲ್ಲಿ ಲಭ್ಯವಿರುವ ಪೆಟ್ರೋಲ್ ಬಂಕ್, ಹಾಸ್ಪಿಟಲ್, ಪಿ.ಜಿ, ಕಲ್ಯಾಣ ಮಂಟಪದ ಪಟ್ಟಿಯನ್ನು ತಯಾರಿಸಿ ಕಛೇರಿಯಲ್ಲಿ ಸಂಗ್ರಹಿಸಿಡಲು ಸೂಚಿಸಿದರು.
  ಕ್ರಮ: <u>ಸಹಾಯಕ ಕಂದಾಯ ಅಧಿಕಾರಿ (ರಾಜಾಜಿನಗರ).</u>

- ಪ್ರಸ್ತುತ ರಾಜಾಜಿನಗರ ವಾರ್ಡ್‌ನಲ್ಲಿ ಯಾವುದಾದರೂ ಕ್ವಾರಂಟೈನ್ ಇರುವುದಾಗಿ ವಿಚಾರಿಸಲಾಗಿ, ಹಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ.ಸಂತೋಷ್ ರವರು ಈ ವಾರ್ಡ್‌ನಲ್ಲಿ ಯಾವುದೇ ಕ್ವಾರಂಟೈನ್ ಕೇಸ್ ಇಲ್ಲದಿರುವ ಬಗ್ಗೆ ಖಚಿತ ಪಡಿಸಿದರು ಹಾಗೂ ಸದರಿ ವಾರ್ಡ್‌ನಲ್ಲಿ ಕೊರೋನ ವೈರಸ್ ಸಾಂಕ್ರಾಮಿಕ ರೋಗದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲು ಸೂಚಿಸಿದರು.
  ಕ್ರಮ: <u>ವಲಯ ಆರೋಗ್ಯ ಅಧಿಕಾರಿ (ರಾಜಾಜಿನಗರ).</u>

- ಸಮಿತಿ ಸದಸ್ಯರಾದ ಶ್ರೀ.ಬಿ.ವಿ.ಚಲುವರಾಜು ರವರು ಮಾತನಾಡುತ್ತಾ, ಈ ವಾರ್ಡ್ ವ್ಯಾಪ್ತಿಯಲ್ಲಿರುವ ಇಂದಿರಾನಗರ ಕೊಳಚೆ ಪ್ರದೇಶದ ಜನಗಳಿಗೆ ಮಾಸ್ಕ್ ಹಾಗೂ ಸ್ಯಾನಿಟೈಸರ್ ಅನ್ನು ಒದಗಿಸಲು ಮನವಿ ಮಾಡಿದರು.
  ಕ್ರಮ: <u>ವಲಯ ಆರೋಗ್ಯ ಅಧಿಕಾರಿ (ರಾಜಾಜಿನಗರ).</u>

- ಸಮನ್ವಯ ಅಧಿಕಾರಿ (Liason Officer) ಆದ ಶ್ರೀ.ರಘು ರವರು ಮಾತನಾಡುತ್ತಾ, ಕರ್ನಾಟಕ ಸರ್ಕಾರದ ಆದೇಶದಂತೆ, ಈಗಾಗಲೇ ಪ್ರತಿ ಕುಟುಂಬದ ಆರೋಗ್ಯ ಸರ್ವೇ ಕಾರ್ಯ ಪ್ರಗತಿಯಲ್ಲಿದ್ದು, ಈ ಕಾರ್ಯ ನಿರ್ವಹಿಸುತ್ತಿರುವ ಮತಗಟ್ಟೆ ಅಧಿಕಾರಿ ಹಾಗೂ ಶಿಕ್ಷಕರುಗಳಿಗೆ ಸ್ಥಳೀಯರು ಸಹಕರಿಸಿ, ILI/SARS ರೋಗಗಳಿಂದ ಬಳಲುತ್ತಿರುವವರನ್ನು ಪತ್ತೆ ಹಚ್ಚಿ ಈ ಕಾರ್ಯವನ್ನು ಯಶಸ್ವಿಗೊಳಿಸಲು ಸೂಚಿಸಿದರು.
  ಕ್ರಮ: <u>ಸಮಿತಿಯ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರು (ರಾಜಾಜಿನಗರ).</u>

- ಸಮನ್ವಯ ಅಧಿಕಾರಿ (Liason Officer) ಆದ ಶ್ರೀ.ರಘು ರವರು ಮಾತನಾಡುತ್ತಾ, ಸಭೆಯಲ್ಲಿ ಹಾಜರಿದ್ದ ಶ್ರೀ.ನಾರಾಯಣ್, ಸಹಾಯಕ ಅಭಿಯಂತರರು ರವರಿಗೆ ಅವರ ವ್ಯಾಪ್ತಿಯಲ್ಲಿ ಬರುವ ಗುತ್ತಿಗೆದಾರರುಗಳಲ್ಲಿ ಲಭ್ಯವಿರುವ ತುರ್ತು ಸಂದರ್ಭಗಳಲ್ಲಿ ಅಗತ್ಯವಿರುವ ಸಲಕರಣೆಗಳನ್ನು (JCB and other Emergency Equipments) ಗುರುತಿಸಿ ಸಂಗ್ರಹಿಸಿಡಲು ಸೂಚಿಸಿದರು.
  <u>ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು (ರಾಜಾಜಿನಗರ).</u>

- ವಿಪತ್ತು ನಿರ್ವಹಣಾ ಸಂದರ್ಭದಲ್ಲಿ ಹೆಚ್ಚುವರಿ ಸಿಬ್ಬಂದಿಗಳು ಕೆಲಸ ನಿರ್ವಹಿಸಬೇಕಾಗಿರುವುದರಿಂದ ಈ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರನ್ನು (ಹೆಸರು, ಹುದ್ದೆ & ಮೊಬೈಲ್ ಸಂಖ್ಯೆ) ಪಟ್ಟಿ ಮಾಡಿ ಕಛೇರಿಯಲ್ಲಿ ಕಛೇರಿಯಲ್ಲಿ ಸಂಗ್ರಹಿಸಿಡಲು ಸೂಚಿಸಿದರು.
  ಕ್ರಮ: <u>ಸಹಾಯಕ ಕಂದಾಯ ಅಧಿಕಾರಿ (ರಾಜಾಜಿನಗರ).</u>

- ಅಧ್ಯಕ್ಷರು ಸಭೆಯಲ್ಲಿ ಮಾತನಾಡುತ್ತಾ, ಎಲ್ಲಾ ಪಾಲಿಕೆ ಸದಸ್ಯರುಗಳಿಗೆ ತುರ್ತು ಸಂದರ್ಭಗಳಲ್ಲಿ ಉಪಯೋಗಿಸಲ್ಪಡುವ WALKIE-TALKIE ಗಳನ್ನು ಒದಗಿಸುವ ಬಗ್ಗೆ ಮಾನ್ಯ ಆಯುಕ್ತರಿಗೆ ಪ್ರಸ್ತಾವನೆ ಮಂಡಿಸಲು ಸೂಚಿಸಿದರು.
  ಕ್ರಮ: ಶ್ರೀ.ರಘು ವಿಪತ್ತು ನಿರ್ವಹಣಾ ಸಮನ್ವಯ ಅಧಿಕಾರಿ (Liason Officer).

- ಶ್ರೀ.ರಘು ವಿಪತ್ತು ನಿರ್ವಹಣಾ ಕೋಶದ ಸಮನ್ವಯ ಅಧಿಕಾರಿ (Liason Officer) ರವರು ಮಾತನಾಡುತ್ತಾ, ಆಪ್ತಮಿತ್ರ ಮೊಬೈಲ್ APP ಬಗ್ಗೆ ಮಾಹಿತಿ ನೀಡಿದರು

ಕೊನೆಯದಾಗಿ ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ವಿಪತ್ತು ನಿರ್ವಹಣಾ ಕೋಶದ ಕಾರ್ಯ ವೈಖರಿ ಬಗ್ಗೆ ಇದುವರೆಗೂ ತಿಳಿಸಿಕೊಟ್ಟಂತಹ ಶ್ರೀ.ರಘು ವಿಪತ್ತು ನಿರ್ವಹಣಾ ಸಮನ್ವಯ ಅಧಿಕಾರಿ ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಧನ್ಯವಾದ ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.

12/5/2020

ಸದಸ್ಯ ಕಾರ್ಯದರ್ಶಿ–ವಾರ್ಡ್ 99 ವಿಪತ್ತು ನಿರ್ವಹಣಾ ಕೋಶ ಹಾಗೂ
ಸಹಾಯಕ ಕಂದಾಯ ಅಧಿಕಾರಿ (ರಾಜಾಜಿನಗರ ಉಪವಿಭಾಗ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

<u>ಪ್ರತಿಯನ್ನು:</u>

1. ಜಂಟಿ ಆಯುಕ್ತರು(ಪಶ್ಚಿಮ) ಬಿಬಿಎಂಪಿ ರವರ ಅವಗಾಹನೆಗಾಗಿ ಮಂಡಿಸಿದೆ.
2. ಕೌನ್ಸಿಲ್ ಕಾರ್ಯದರ್ಶಿ(ಕೇಂದ್ರ ಕಛೇರಿ) ಬಿಬಿಎಂಪಿ ರವರ ಅವಗಾಹನೆಗಾಗಿ ಮಂಡಿಸಿದೆ.
3. ಉಪ ಆಯುಕ್ತರು, (ಪಶ್ಚಿಮ) ಬಿಬಿಎಂಪಿ ರವರ ಅವಗಾಹನೆಗಾಗಿ ಮಂಡಿಸಿದೆ.
4. ಮುಖ್ಯ ಅಭಿಯಂತರರು (ಪಶ್ಚಿಮ) ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು(ರಾಜಾಜಿನಗರ) ಮಾಹಿತಿಗಾಗಿ ಕಳುಹಿಸಿದೆ.
6. ಕಾರ್ಯಪಾಲಕ ಅಭಿಯಂತರರು(ವಿದ್ಯುತ್–ಪಶ್ಚಿಮ) ಮಾಹಿತಿಗಾಗಿ ಕಳುಹಿಸಿದೆ.
7. ಸ.ಕಾ.ನಿ.ಅ(ಸ್ಲಂ–ಬೋರ್ಡ್) ರವರಿಗೆ ಕಳುಹಿಸುತ್ತಾ ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಾಗಲು ಸೂಚಿಸಿದೆ.
8. ಕಂದಾಯ ಅಧಿಕಾರಿ(ರಾಜಾಜಿನಗರ) ರವರ ಮಾಹಿತಿಗಾಗಿ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು(ಬಿ.ಡಬ್ಲ್ಯೂ.ಎಸ್.ಎಸ್.ಬಿ/ಬೆಸ್ಕಾಂ) ರವರ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
10. ಸ.ಕಾ.ಪಾ.ಅ(ರಾಜಾಜಿನಗರ) ರವರ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
11. ಸ.ಕಾ.ಪಾ.ಅ ಘನತ್ಯಾಜ್ಯ ನಿರ್ವಹಣೆ (ರಾಜಾಜಿನಗರ) ರವರ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
12. ಸ.ಕಂ.ಅ(ಮಾರುಕಟ್ಟೆ/ಕಲ್ಯಾಣ–ಪಶ್ಚಿಮ) ರವರ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
13. ಕಛೇರಿ ಕಡತಕ್ಕೆ.